ಆ ಬಗ್ಗೆ ಹಿಂದಿನ ಸರಕಾರದವರು ಇದ್ದಾಗ ಒಂದು ಸದನದ ಸಮಿತಿಯನ್ನು ಮಾಡಿ ಅಲ್ಲಿರತಕ್ಕಂಥ ಪಾಸ್ತುವಾಂಶಗಳನ್ನು ಸರಕಾರದ ಗಮನಕ್ಕೆ ತರುವಂತೆ ವ್ಯವಸ್ಥೆ ಮಾಡಿತ್ತು. ಆ ಸಮಿತಿಯು ಕೊಡ ತಕ್ಕಂಥ ಸಲಹೆಗಳನ್ನು ಸರಕಾರದವರು ಗಮನಿಸಿ ಕ್ರಮ ತೆಗೆದುಕೊಳ್ಳಲು ಒಂದು ವ್ಯವಸ್ಥೆ ಆಗಿತ್ತು. ಅಂಥ ಒಂದು ಸಮಿತಿಯನ್ನು ತಪ್ಪು ಸರಕಾರದವರು ರಚನೆ ಮಾಡುವುದಕ್ಕೆ ತಯಾರಾಗಿದ್ದೀರಾ ಎಂದು ತಪ್ಪು ಮೂಲಕ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಅಧ್ಯಕ್ಷರು.—ಮುಂದಿನ ಗಮನ ಸೆಳೆಯುವ ಸೂಚನೆ ಮಾನ್ಯ ಶ್ರೀ ಸಿಂಧ್ಯ ಅವರದ್ದು

ಶ್ರೀ ಸಿ. ಬೈರೇಗೌಡ.—ಮಾನ್ಯ ಸಚಿವರು ಉತ್ತರ ಕೊಡುತ್ತಾರೆ...

ಶ್ರೀ ಜಿ.ಪುಟ್ಟಸ್ವಾಮಿಗೌಡ.—ಇಲ್ಲ, ಉತ್ತರ ಇಲ್ಲ.

ರಾಜ್ಯ ಸರ್ಕಾರದ ಎ ಹಾಗೂ ಬಿ ಗುಂಪಿನ ಅಧಿಕಾರಿಗಳ ಮುಷ್ಕರದ ದಿನಗಳ ಗೈರುಹಾಜರಿಯನ್ನು ಸಾಂದರ್ಭಿಕ ರಜೆಯೆಂದು ಪರಿಗಣಿಸುವುದು ಮತ್ತು ಸಂಬಳದ ಬಿಡುಗಡೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಸನ್ಮಾನ್ಯ ಸಭಾಧ್ಯಕ್ಷರೆ, ರಾಜ್ಯ ಸರಕಾರದ 'ಎ' ಹಾಗೂ 'ಬಿ' ಗುಂಪಿನ ಅಧಿಕಾರಿಗಳ ಮುಷ್ಕರ ದಿನಗಳ ಗೈರು ಹಾಜರಿಯನ್ನು ಸಾಂದರ್ಭಿಕ ರಜೆಯೆಂದು ಪರಿಗಣಿಸುವುದು ಹಾಗೂ ತಡೆ ಹಿಡಿಯಲಾದ ಅವರ ಸಂಬಳವನ್ನು ಬಿಡುಗಡೆ ಮಾಡುವ ಬಗ್ಗೆ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—

೧. ವಿಧಾನಸಭಾ ಸದಸ್ಯರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ನೀಡಿರುವ ಗಮನ ಸೆಳೆಯುವ ಸೂಚನೆಯನ್ನು ಕೆಳಗೆ ಉಲ್ಲೇಖಿಸಲಾಗಿದೆ.

"ಬಗ್ಗೆ : ರಾಜ್ಯ ಸರ್ಕಾರದ I ಮತ್ತು IIನೇ ದರ್ಜೆ ಅಧಿಕಾರಿಗಳ ಗೈರು ಹಾಜರಿಯನ್ನು ಸಾಂದರ್ಭಿಕ ರಜೆಯೆಂದು ಪರಿಗಣಿಸುವುದು ಮತ್ತು ತಡೆಹಿಡಿದ ಅವರ ಸಂಬಳವನ್ನು ಬಿಡುಗಡೆ ಮಾಡುವುದು."

೨. ಮೇಲೆ ಉಲ್ಲೇಖಿಸಿದ ಗಮನ ಸೆಳೆಯುವ ಸೂಚನೆಯಲ್ಲಿ ಮುಷ್ಕರದ ಬಗ್ಗೆ ಉಲ್ಲೇಖವಿಲ್ಲದಿದ್ದರೂ ಅಲ್ಲಿ ಉಲ್ಲೇಖಿಸಲಾದ ಗೈರು ಹಾಜರಿಯು ದಿನಾಂಕ ೧೫-೨-೧೯೯೦ ರಿಂದ ೧೯-೨-೧೯೯೦ ರವರೆಗಿನ ಮುಷ್ಕರದ ಅವಧಿಯಲ್ಲಿನ ಗೈರು ಹಾಜರಿಗೆ ಸಂಬಂಧಿಸಿದ್ದೆಂದು ಭಾವಿಸಲಾಗಿದೆ.

೩. ನಾವು ಸರ್ಕಾರದಲ್ಲಿ ಅಧಿಕಾರ ವರ್ಗ (heirarchical) ಸಂಸ್ಥೆಯನ್ನು ಹೊಂದಿದ್ದು ಇಲ್ಲಿ ಜವಾಬ್ದಾರಿಯು ಮಟ್ಟವು ಅಧಿಕಾರ ವರ್ಗದ (heirachical) ಮಟ್ಟಕ್ಕೆ ಪ್ರಮಾಣ ಬದ್ಧವಾಗಿದೆ. ಅಧಿಕಾರ ವರ್ಗ (heirarchy)ದಲ್ಲಿ ಎ ಮತ್ತು ಬಿ ಗುಂಪಿನ ಅಧಿಕಾರಿಗಳು ಉನ್ನತ ಹುದ್ದೆಗಳನ್ನು ಆಕ್ರಮಿಸಿಕೊಂಡಿದ್ದು, ಅಧಿಕಾರ ವರ್ಗದ ಕೆಳಹಂತಗಳಲ್ಲಿರುವ ಸಿ ಮತ್ತು ಡಿ ಗುಂಪಿನ ನೌಕರರ ಅಧಿಕಾರ ವರ್ಗ (heirarchy) ಕ್ಕಿಂತ ಹೆಚ್ಚಿನ ಜವಾಬ್ದಾರಿ ಹೊಂದಿದ್ದಾರೆ. ಆದರೆ ಸರ್ಕಾರವು ಮಾತುಕತೆಯಲ್ಲಿ ಭಾಗವಹಿಸಿದಂತೆ ಕರೆ ಕೊಟ್ಟಿದ್ದರೂ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘವು ಪ್ರಾರಂಭಿಸಿದ ಮುಷ್ಕರದಲ್ಲಿ ಪಾಲ್ಗೊಂಡು ಅನೇಕ ಎ ಮತ್ತು ಬಿ ಗುಂಪಿನ ಅಧಿಕಾರಿಗಳು ಜವಾಬ್ದಾರಿಯುತ ಸರ್ಕಾರಿ ಅಧಿಕಾರಿಗಳಿಗೆ ಸಲ್ಲದ ರೀತಿಯಲ್ಲಿ ನಡೆದುಕೊಂಡಿದ್ದಾರೆ.

೪. ಆರೋಗ್ಯಕರ ಆಡಳಿತದ ಕಾರ್ಯವು ಅದರ ಸಿಬ್ಬಂದಿಯ ದಕ್ಷತೆಯ ಮೇಲೆ ಮಾತ್ರವಲ್ಲದೆ ಆ ಸರ್ಕಾರಿ ನೌಕರರ ಉನ್ನತ ಮಟ್ಟದ ವೈಯುಕ್ತಿಕ ಚಾರಿತ್ರ್ಯ ಮತ್ತು ಶಿಸ್ತನ್ನು ಪಾಲಿಸುವುದರ ಮೇಲೆ ಅವಲಂಬಿಸಿರುತ್ತದೆಂಬ ಅಂಶವನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಲಾಗಿದೆ. ಒಬ್ಬ ಸರ್ಕಾರಿ ನೌಕರ ಅದರಲ್ಲೂ ಮುಖ್ಯವಾಗಿ ಒಬ್ಬ ಅಧಿಕಾರಿ ಆಡಳಿತ ಯಂತ್ರದಲ್ಲಿನ ಒಂದು ಭಾಗದಿಂದಾಗಿ ಅವನು ಸಮಾಜದಲ್ಲಿ ವಿಶೇಷ ಸ್ಥಾನವನ್ನು ಪೊಂದಿದ್ದು ಸಮಾಜದ ಒಳಿತು ಮತ್ತು ಉಳಿವುಗಳು, ಅವನ ಅಜೆತನೆಯಿಲ್ಲದ ಮತ್ತು ದಕ್ಷತೆಯ ಕಾರ್ಯನಿರ್ವಹಿಸುವಿಕೆ ಮೇಲೆ ಅವಲಂಬಿತವಾಗಿರುತ್ತದೆ. ಅವನು ಯಾವುದೇ ಪರಿಸ್ಥಿತಿಯಲ್ಲಿ ಕಾರ್ಯನಿರ್ವಹಿಸುತ್ತಿರಲಿ, ಅವನ ಕೆಲಸ ಮತ್ತು ನಡತೆ ಜನಗಳ ಮೇಲೆ ನೇರವಾದ ಪರಿಣಾಮ ಬೀರುತ್ತವೆ. ಇದು ಅಧಿಕಾರ ಚಲಾಯಿಸುವ ಮತ್ತು ಸದ್ವರ್ತನೆಯಿಂದ

ಸನ್ಮಾನಿತವಾಗುವ ಅವನಿಗೆ ವಿಶೇಷ ಗೌರವವನ್ನು ಪಡೆಯುವ ಸ್ಥಿತಿಯಲ್ಲಿರಿಸಿರುತ್ತದೆ. ಆದ್ದರಿಂದ ಸಮಾಜವು ಅವನು ಮಾಡಿರಿಯ ಪ್ರಜೆಯಾಗಿ ವರ್ತಿಸುವುದನ್ನು ಹಾಗೂ ತನ್ನ ವರ್ತನೆಯಿಂದ ಆದರೆ ಕಲ್ಯಾಣವನ್ನು ತೊಂದರೆಯಲ್ಲಿ ಸಿಲುಕಿಸುವ ಯಾವುದೇ ಕಾರ್ಯವನ್ನು ಅವನು ಮಾಡದಿರುವುದನ್ನು ಸಹಜವಾಗಿ ಬಯಸುತ್ತದೆ ಸರ್ಕಾರದ ಚಟುವಟಿಕೆಗಳು ಎಲ್ಲಾ ರಂಗಗಳಲ್ಲಿ ವ್ಯಾಪಕವಾಗಿ ಹಬ್ಬುತ್ತಿರುವ ಈ ದಿನಗಳಲ್ಲಿ, ಈ ಚಟುವಟಿಕೆಗಳ ತಡೆಯುವುದು ಒಂದು ಸ್ವಲ್ಪ ಕಾಲಾವಧಿಗಾದರೂ, ಸಮುದಾಯಕ್ಕೆ ವ್ಯಾಪಕ ಈ ತೊಂದರೆಗಳನ್ನುಂಟು ಮಾಡಬಲ್ಲದು. ಆದ್ದರಿಂದ ನೌಕರರು ವೈಯಕ್ತಿಕವಾಗಿಯಾಗಲಿ ಅಥವಾ ಅಸೋಸಿಯೇಷನ್‌ಗಳ ಸದಸ್ಯರಾಗಿಯಾಗಲಿ ಯಾವುದೇ ಕುಂದು ಕೊರತೆಗಳನ್ನು ಹೊಂದಿರಲಿ ಪರಿಹಾರವನ್ನು ತಪ್ಪದೆ ಸೂಕ್ತ ದ್ವಾರಾ ಕೋರಬೇಕು ಮತ್ತು ಯಾವುದೇ ಪ್ರಕರಣದಲ್ಲಿ ಆಡಳಿತದ ನಿರ್ವಿಘ್ನ ಕಾರ್ಯವನು ಅಸ್ತವ್ಯಸ್ತ ಮಾಡುವುದು ಒತ್ತಾಯದ ಕ್ರಮಗಳ ಮೂಲಕ ವಲ್ಲ. ಆದರೆ ಈಗಾಗಲೇ ಮೇಲೆ ಹೇಳಿದಂತೆ ಮುಷ್ಕರದಲ್ಲಿ ಭಾಗವಹಿಸಿದ 'ಎ' ಮತ್ತು 'ಬಿ' ಗುಂಪಿನ ನೌಕರರು ಜವಾಬ್ದಾರಿಯುತ ಸರ್ಕಾರಿ ಅಧಿಕಾರಿಗಳಿಗೆ ಸಲ್ಲದ ರೀತಿಯಲ್ಲಿ ನಡೆದುಕೊಂಡಿದ್ದಾರೆ ಆದ್ದರಿಂದ ಸರ್ಕಾರವು ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿಗಳ ೧೦೬–ಎ ನಿಯಮವನ್ನು ೧೦೬–ಬಿ (೧) ನಿಯಮದ ಜೊತೆ ಸೇರಿಸಿಕೊಂಡು ಓದಿದಾಗ ಹೊಂದಿರುವ ಅಧಿಕಾರಗಳನ್ನು ಪ್ರಯೋಗಿಸಿ ಅವರು ಮುಷ್ಕರದಲ್ಲಿ ಭಾಗವಹಿಸಿದ ಅವಧಿಯನ್ನು ಅನಧಿಕೃತ ಗೈರು ಹಾಜರಿಯೆಂದು ಪರಿಗಣಿಸಿ ಆದೇಶ ಸಂಖ್ಯೆ ಎಫ್‌ಡಿ ೯ ಎಸ್‌ಆರ್‌ಎಸ್ ೯೦, ದಿನಾಂಕ ೨೬–೨–೧೯೯೦ನ್ನು ಹೊರಡಿಸಿದೆ.

ಶ್ರೀ ಪಿ. ಜಿ ಆರ್. ಸಿಂಧ್ಯಾ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಉತ್ತರದಲ್ಲಿ ಎ ವರ್ಗದ ಅಧಿಕಾರಿಗಳು ಯಾರಿದ್ದಾರೆ ಅವರಲ್ಲಿ ಕೆಲವರು ಈಗಾಗಲೇ ಸಂಬಳ ತೆಗೆದುಕೊಂಡಿದ್ದಾರೆಂದು ನಾನು ಕೇಳಿದ್ದೇನೆ. ನಾವು ಬಂದಿದ್ದೆವು ಎಂದು ಹೇಳಿ ಅವರು ಹಾಜರಿ ಹಾಕಿಬಿಟ್ಟಿದ್ದಾರೆ. ಇದು ಎಷ್ಟರಮಟ್ಟಿಗೆ ನಿಜವೋ ಗೊತ್ತಿಲ್ಲ. ಎರಡನೆಯದು. ಸಿ ಮತ್ತು ಡಿ ವರ್ಗದ ನೌಕರರಿಗೆ ಸಾಂಧರ್ಭಿಕ ರಜೆ ಎಂದು ಟ್ರೀಟ್ ಮಾಡಿ ೪ ದಿನಕ್ಕೆ ಸಂಬಳ ಕೊಟ್ಟಿದ್ದಾರೆ. ಮತ್ತೆ ಕೆಲವರು ಅಧಿಕಾರಿಗಳಿಗೆ ಬರಬೇಕೆಂದು ಮನಸಿದ್ದರೂ ಬರುವುದಕ್ಕೆ ಆಗಲಿಲ್ಲವೆಂದಿದ್ದಾರೆ. ಆದರೆ ಕೆಲವರು ಮಾತ್ರ ಬಂದಿದ್ದೇವೆಂದು ಹೇಳಿ ಸಂಬಳ ತೆಗೆದುಕೊಂಡಿದ್ದಾರೆ. ಈ ರೀತಿ ಡಿಸ್ಕ್ರಿಮಿನೇಷನ್ ಸರಿಯಾಗಿ ಕಾಣುವುದಿಲ್ಲ. ಸರ್ಕಾರಿ ನೌಕರರ ಮುಷ್ಕರದ ಸಂಬಂಧದಲ್ಲಿ ಸರ್ಕಾರದ ನಿಲುವಿನ ಬಗ್ಗೆ ನಾನು ಪ್ರಸ್ತಾಪ ಮಾಡಲು ಹೋಗುವುದಿಲ್ಲ. ಕೆ.ಸಿ.ಎಸ್.ಆರ್. ಆಡಿಯಲ್ಲಿ ಎ ಮತ್ತು ಬಿ ದರ್ಜೆ ಅಧಿಕಾರಿಗಳ ಬಗ್ಗೆ ಕೆಲವರಿಗೆ ಡಿಸ್ಕ್ರಿಮಿನೇಷನ್ ಆಗಿದೆ ಎನ್ನುವುದು.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಒಂದು, ಕೆಲವರು ಬರಲಾರದೆ ಆನಂತರ ಡ್ಯೂಟಿಗೆ ಬಂದಿದ್ದೆವೆಂದು ಹೇಳಿ ಸಂಬಳ ತೆಗೆದುಕೊಂಡಿದ್ದಾರೆಂಬುದು. ಈ ಬಗ್ಗೆ ನನಗೆ ಗೊತ್ತಿಲ್ಲ, ವಿಚಾರಿಸುತ್ತೇನೆ. ಆ ರೀತಿ ಬರಲಾರದೆ ಸೈನ್ ಮಾಡಿದ್ದರೆ ಅದು ತಪ್ಪು. ಆದರೆ ಅನೇಕ ಜನ ಬಂದಿದ್ದರು. ಇಲ್ಲ ಎನ್ನುವುದಕ್ಕಾಗುವುದಿಲ್ಲ. ಒಂದು ಪಕ್ಷ ಬರದೆ ಬಂದಿದ್ದೆವೆಂದು ಹೇಳಿ ಸಂಬಳ ತೆಗೆದುಕೊಳ್ಳುವವರಿದ್ದರೆ ಅವರ ವಿರುದ್ಧ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ. ಇನ್ನೊಂದು ಹೇಳಿದರು. ಅನೇಕ ಅಧಿಕಾರಿಗಳು ನಾವು ಬರಬೇಕೆಂದಿದ್ದೆವು ಆದರೆ ಆಫೀಸ್ ಬಳಿ ತಡೆಯಾಯಿತು, ಅಥವಾ ಆಫೀಸಿಗೆ ಹೋದಾಗ ಆಲಾಕಾಗಿತ್ತು ಎಂದು ಹೇಳಿದ್ದಾರೆಂದರು. ಅವರು ಕಚೇರಿಗೆ ಬರಲು ಏಕೆ ಆಗಲಿಲ್ಲ ಎಂದೂ ಬರೆದು ತಿಳಿಸಿದರೆ ನಾವು ಪರಿಶೀಲನೆ ಮಾಡುತ್ತೇವೆ. ನಾಳೆ ೨೦ರಂದು ನಮ್ಮ ಅಧಿಕಾರಿಗಳು ನೌಕರರ ಸಂಘದವರೂ ಈ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ. ಈ ಕಾರಣಕ್ಕೆ ಬರಲಾಗಲಿಲ್ಲ ಎಂದರೆ ಅದನ್ನು ನಾವು ಪರಿಶೀಲನೆ ಮಾಡಬಹುದು.

ನಿಯಮ ೩೩ಳಿರ ಮೇರೆಗೆ

ಅಧ್ಯಕ್ಷರು,—ಈಗ ೩೩ಳಿನೇ ನಿಯಮ ನೋಟಿಸ್‌ಗಳು.

ಮಹಾದಾಯಿ ನದಿಯ ನೀರನ್ನು ಮಲಪ್ರಭ ನದಿಗೆ ಜೋಡಣೆ ಮಾಡುವುದು

ಶ್ರೀ ಪಿ. ಸಿ. ಸಿದ್ದನಗೌಡರ್.—ಧಾರವಾಡ ಜಿಲ್ಲೆಯ ನವಲಗುಂದ ನರಗುಂದ ಹಾಗೂ ಹುಬ್ಬಳ್ಳಿ ತಾಲ್ಲೂಕಿನ ರೈತರು ಈಗಾಗಲೇ ಮಹಾದಾಯಿ ಮತ್ತು ಮಲಪ್ರಭಾ ನದಿ ಜೋಡಣೆ ಕುರಿತು ಸರ್ಕಾರವು ಗಮನವನ್ನು ಸೆಳೆದಿದ್ದು ಸರ್ಕಾರವವರು ಯಾವ ನಿರ್ಣಯವನ್ನು ತೆಗೆದುಕೊಂಡಿದ್ದಾರೆ